## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 396 (529) |
| ಸದಸ್ಯರ ಹೆಸರು | : ಡಾ:ವೈ.ಎ.ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : 19.02.2024 |
| ಉತ್ತರಿಸಬೇಕಾದ ಸಚಿವರು | : ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು. |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿನ ಅನುದಾನ ರಹಿತ ಶಾಲಾ ಕಾಲೇಜುಗಳು, ಪ್ರಾಥಮಿಕ ಮತ್ತು ಪ್ರೌಢ ಹಾಗೂ ಪದವಿ ಪೂರ್ವ ಕಾಲೇಜುಗಳ ಸಂಖ್ಯೆ ಎಷ್ಟು; ಹಾಗೂ ಅದರಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಹಾಗೂ ಬೋಧಕ ವರ್ಗದವರುಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು) | (see tables below) |
| ಆ) | ಮೇಲ್ಕಂಡ ಶಾಲಾ ಕಾಲೇಜುಗಳಲ್ಲಿ ಬೋಧಿಸುತ್ತಿರುವ ಬೋಧಕರುಗಳಿಗೆ ಕನಿಷ್ಠ ವೇತನ ಕಾಯ್ದೆ ಅಡಿಯಲ್ಲಿ ವೇತನ ನೀಡಲಾಗುತ್ತಿದೆಯೇ; | ಅಧಿಸೂಚನೆ ಸಂಖ್ಯೆ: ಇಡಿ 104 ಎಸ್ಇಪಿ 2005, ದಿನಾಂಕ: 12.01.2006ರಲ್ಲಿ ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಖಾಸಗಿ ಅನುದಾನ ರಹಿತ ಪ್ರಾಥಮಿಕ, ಪ್ರೌಢ ಮತ್ತು ಪದವಿ ಪೂರ್ವ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಗಳ ಸೇವಾ ಷರತ್ತು ಮತ್ತು ನಿಯಮಗಳು) 2005ರ ನಿಯಮಗಳನ್ನು ರಚಿಸಲಾಗಿದ್ದು ಸದರಿ ನಿಯಮಗಳಂತೆ ಖಾಸಗಿ ಅನುದಾನರಹಿತ ಶಾಲೆಗಳಲ್ಲಿನ ಸಿಬ್ಬಂದಿಗಳಿಗೆ ಶಾಲೆಯ ಆಡಳಿತ ಮಂಡಳಿಗಳು ಕೆಳಕಂಡಂತೆ |

Answer to ಅ):

| **ಅನುದಾನರಹಿತ ಶಾಲಾ ಕಾಲೇಜುಗಳು** | | |
|---|---|---|
| ಪ್ರಾಥಮಿಕ | ಪ್ರೌಢ | ಪದವಿ ಪೂರ್ವ |
| 8306 | 8139 | 3559 |
| **ವಿದ್ಯಾರ್ಥಿಗಳ ಸಂಖ್ಯೆ** | | |
| ಪ್ರಾಥಮಿಕ ಮತ್ತು ಪ್ರೌಢ | | ಪದವಿ ಪೂರ್ವ |
| 46,78,903 | | 6,75,655 |

| **ಬೋಧಕರುಗಳ ಸಂಖ್ಯೆ** | | |
|---|---|---|
| ಪ್ರಾಥಮಿಕ | ಪ್ರೌಢ | ಪದವಿ ಪೂರ್ವ |
| 1,73,951 | | 26,513 |

| | | |
|---|---|---|
| | | ಸೇವಾ ಭದ್ರತೆ / ಸೌಲಭ್ಯಗಳನ್ನು ಕಡ್ಡಾಯವಾಗಿ ಒದಗಿಸಬೇಕಾಗಿದೆ.<br>ಅ) ನಿಯಮ-3(ಬಿ) ರನ್ವಯ ಅನುದಾನರಹಿತ ಶಾಲೆಗಳಲ್ಲಿನ ಸಿಬ್ಬಂದಿಗಳಿಗೆ ವೇತನವನ್ನು ತತ್ಸಮಾನ ಸರ್ಕಾರಿ ಸೇವೆಯಲ್ಲಿನ ಸಿಬ್ಬಂದಿಗಳ ಕನಿಷ್ಠ ಮೂಲ ವೇತನಕ್ಕೆ ಸಮನಾದ ವೇತನವನ್ನು ನೀಡಬೇಕು.<br>ಆ) ನಿಯಮ-4 ರನ್ವಯ ಅನುದಾನರಹಿತ ಶಾಲಾ ಸಿಬ್ಬಂದಿಗಳಿಗೆ ರಜಾ ಸೌಲಭ್ಯಗಳನ್ನು ನೀಡಬೇಕು.<br>ಇ) ನಿಯಮ-5 ರನ್ವಯ ಅನುದಾನರಹಿತ ಶಾಲಾ ಸಿಬ್ಬಂದಿಗಳ ತಖ್ತೆ ಹಾಗೂ ಸೇವಾ ಪುಸ್ತಕವನ್ನು ನಿರ್ವಹಿಸಬೇಕು.<br>ಈ) ನಿಯಮ-6 ರನ್ವಯ ಅನುದಾನರಹಿತ ಶಾಲಾ ಸಿಬ್ಬಂದಿಗಳಿಂದ ಶಾಲೆಯ ಆಡಳಿತ ಮಂಡಳಿಯವರು ಒತ್ತಾಯ ಪೂರ್ವಕವಾಗಿ ದಿನಾಂಕ ನಮೂದಿಸದೇ ರಾಜೀನಾಮೆ ಪತ್ರವನ್ನು ಪಡೆಯತಕ್ಕದ್ದಲ್ಲ ಎಂದಿರುತ್ತದೆ. |
| ಇ) | ಮೇಲ್ಕಂಡ ಶಾಲಾ ಕಾಲೇಜುಗಳಲ್ಲಿ ಬೋಧಿಸುತ್ತಿರುವ ಬೋಧಕರುಗಳಿಗೆ ಆರೋಗ್ಯ ವಿಮಾ ಯೋಜನೆ ಜಾರಿಗೊಳಿಸುವ ಯೋಜನೆ ಸರ್ಕಾರದ ಗಮನಕ್ಕೆ ಬಂದಿದೆಯೇ; | ಇಲ್ಲ |
| ಈ) | ಹಾಗಿದ್ದಲ್ಲಿ, ಯಾವ ಕಾಲಮಿತಿಯೊಳಗೆ ಸರ್ಕಾರ ಸದರಿ ಯೋಜನೆಯನ್ನು ಅನುಷ್ಠಾನಗೊಳಿಸುವುದು? (ಸಂಪೂರ್ಣ ವಿವರ ಒದಗಿಸುವುದು) | ಅನ್ವಯಿಸುವುದಿಲ್ಲ |

ಸಂಖ್ಯೆ: ಇಪಿ 23 ಪಿಜಿಸಿ 2024

**(ಎಸ್. ಮಧು ಬಂಗಾರಪ್ಪ)**

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು.